# ಮಾಸ್ತಿ ವೆಂಕಟೇಶ ಅಯ್ಯಂಗಾರರ ಸಣ್ಣ ಕಥೆಗಳಲ್ಲಿನ ಕೌಟುಂಬಿಕ ಸಫಲತೆ

**ರೇಣುಕಮ್ಮ ಜೆ.**

ಪ್ರಾಧ್ಯಾಪಕರು, ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು, ಯಲಹಂಕ ಉಪನಗರ, ಬೆಂಗಳೂರು.

**Received:** 19-08-2024 ; **Acepted:** 05-09-2024 ; **Published:** 02-10-2024

**DOI: https://doi.org/10.5281/zenodo.13870938**

## ABSTRACT:

ಸಣ್ಣ ಕತೆಗಳ ಜನಕ ಎಂದೇ ಪ್ರಸಿದ್ಧರಾದವರು ಮಾಸ್ತಿ ವೆಂಕಟೇಶ ಅಯ್ಯಂಗಾರರು. ಶ್ರೀನಿವಾಸ ಎಂಬ ಕಾವ್ಯನಾಮದಿಂದ ಸಣ್ಣ ಕಥೆಗಳನ್ನು ರಚಿಸಿದ್ದಾರೆ. ಅವರ ಕೆಲವು ಸಣ್ಣ ಕಥೆಗಳಲ್ಲಿ ಬರುವ ಕೌಟುಂಬಿಕ ಸಫಲತೆಯನ್ನು ಶೋಧಿಸುವ ಪ್ರಯತ್ನವೇ ಈ ಲೇಖನದ ಉದ್ದೇಶ. 'ರಂಗನ ಮದುವೆ' ಯಿಂದ ಹಿಡಿದು ಮಾಯಣ್ಣನ ಕನ್ನಡಿ ತನಕ ಅವರ ಸಣ್ಣ ಕಥೆಗಳಲ್ಲಿ ಕಾಣುವುದು ಸಾಮಾನ್ಯ ಘಟನೆಗಳನ್ನು ಮತ್ತು ಉತ್ಪ್ರೇಕ್ಷೆಯಿಲ್ಲದೆ ನಿರೂಪಿಸುವ ಶೈಲಿಯನ್ನು. 'ವೆಂಕಟಿಗನ ಹೆಂಡತಿ'ಯಲ್ಲಿ ನೀತಿ ತಪ್ಪಿದ ಹೆಂಡತಿಯನ್ನು ಮತ್ತೆ ಅನುಕಂಪದಿಂದ ಸ್ವೀಕರಿಸುವ ಕಟ್ಟಿಗೆ ಮಾರುವ ವೆಂಕಟಿಗನಿಂದ ಹಿಡಿದು ಕರ್ಮಯೋಗದ ಕೊನೆಯದಿನದಲ್ಲಿ ನಿರ್ಲಿಪ್ತರಾಗಿ ಬೆಳಕಿನ ಲೋಕಕ್ಕೆ ತೆರಳಿದ ಮಹರ್ಷಿ ವಾಮದೇವ ದ್ವೈಪಾಯನರವರೆಗೆ ಎಲ್ಲಾ ಪಾತ್ರಗಳ ಜೀವನವನ್ನು ಚಿತ್ರಿಸಿರುವುದು ಸಹಾನುಭೂತಿಯುತವಾದ ದೃಷ್ಟಿಯಿಂದ. ಇವರ ಕಥೆಗಳಲ್ಲಿ ಆವೇಶವಿಲ್ಲ. ಸಮಾಜ ಸುಧಾರಣೆಯ ತವಕವಿಲ್ಲ. ದೋಷಗಳನ್ನು ತೊಡೆಯುವ ಆಗ್ರಹವಿಲ್ಲ. ಜೀವನದ ಕಷ್ಟ ಸುಖ, ಆತ್ಮದ ಅನುಭವ ಇವುಗಳನ್ನು ಚಿತ್ರಿಸಿದರೆ ತಾನಾಗಿಯೇ ಮನುಷ್ಯನ ಹೃದಯ ಪಕ್ವವಾಗುತ್ತದೆ, ಮೃದುವಾಗುತ್ತದೆ ಎಂಬ ನಿಲುವಿನ ಮೇಲೆ ಕಥೆಗಳನ್ನು ರಚಿಸಿರುವುದು ಈ ಅಧ್ಯಯನದಿಂದ ತಿಳಿದು ಬರುತ್ತದೆ.

## KEYWORDS:

ಮಾಸ್ತಿ ವೆಂಕಟೇಶ ಅಯ್ಯಂಗಾರ, ಶ್ರೀನಿವಾಸ, ವೆಂಕಟಿಗನ ಹೆಂಡತಿ, ಕೌಟುಂಬಿಕ ಸಫಲತೆ, ಕಥನ ತಂತ್ರ.

'ವೆಂಕಟಿಗನ ಹೆಂಡತಿ' ಊರಿನ ಸಾಹುಕಾರನೊಬ್ಬನ ಜೊತೆ ವಿವಾಹೇತರ ಸಂಬಂಧ ಇಟ್ಟುಕೊಂಡು ಅವನೊಂದಿಗೆ ಕೆಲಕಾಲ ಇದ್ದುಬಿಡುತ್ತಾಳೆ. ಇದರಿಂದ ನೊಂದ ವೆಂಕಟಿಗ ಅವಳನ್ನು ಮರಳಿ ಕರೆತರುವ ಪ್ರಯತ್ನ ಮಾಡಿದರೂ ಅವಳು ಸಾಹುಕಾರನ ಮನೆಯನ್ನು ಬಿಟ್ಟು ಬರಲು ಒಪ್ಪಳು. ಮರು ಮದುವೆಯನ್ನೂ ಮಾಡಿಕೊಳ್ಳದ ವೆಂಗಟಿಗನು ದೂರದ ಊರಾದ ಬೆಂಗಳೂರಿಗೆ ಬಂದು ಸೌದೆ ಹೊಡೆದು ಮಾರಿ ಜೀವನ ಕಟ್ಟಿಕೊಳ್ಳುತ್ತಾನೆ. ಈ ಕತೆಯಲ್ಲಿನ ವೆಂಕಟಿಗ ಅಪರೂಪದ ವ್ಯಕ್ತಿ. ಹೆಂಡತಿ ತನ್ನನ್ನು ಬಿಟ್ಟು ಪರಪುರುಷನ ಜೊತೆ ಹೋಗಿದ್ದಕ್ಕೆ ಸಿಟ್ಟಿಲ್ಲ ಬೇಸರವಿದೆ ಎನ್ನುತ್ತಾನೆ. ಮುಂದೆ ಅವನ ಹೆಂಡತಿ ಸಾಹುಕಾರನಿಂದ ತಿರಸ್ಕೃತಳಾಗಿ ಮತ್ತೆ ವೆಂಕಟಿಗನ ಬಳಿಗೆ ಬಂದು ಕ್ಷಮೆಯಾಚಿಸುತ್ತಾಳೆ. ಅವಳ ಜೊತೆ ಒಂದು ಮಗುವು ಇರುತ್ತದೆ. ಮರಳಿ ಬಂದ ಹೆಂಡತಿಯನ್ನು ಮತ್ತು ಆ ಮಗುವನ್ನು ಒಪ್ಪಿಕೊಳ್ಳುತ್ತಾನೆ. ವೆಂಕಟಿಗನ ಹೆಂಡತಿ ಬಿಟ್ಟುಹೋಗಿ ಎಷ್ಟೋ ತಿಂಗಳುಗಳೇ ಕಳೆದುಹೋಗಿವೆ. ಆದರೆ ಮರಳಿಬಂದ ಹೆಂಡತಿ ತನ್ನ ಜೊತೆ ಕರೆತಂದ ಮಗುವಿನ ಮುಖವನ್ನು ತೋರಿಸಿ ಇದೋ ನೋಡು ಇದರ ಕಣ್ಣು, ಹಣೆ ನಿನ್ನಂತೆಯೆಯಿದೆ ಎಂದು ತೋರಿಸುವಾಗ ಪಾಪ ಮಗುವಿನ ವಯಸ್ಸು ಎಷ್ಟು ಎಂದು ಕೇಳಿ ಅವಳಿಗೇಕೆ ಬೇಸರ ಮಾಡಬೇಕು ಎಂದು ಸುಮ್ಮನೆ ಹೂ ಅಂದೆ ಎನ್ನುತ್ತಾನೆ. ಇಲ್ಲಿ ನಿರೂಪಕರ ಮನಸ್ಸಿಗೂ ಕುತೂಹಲ ಸುಳಿದು ವೆಂಕಟಿಗನೇ ಹುಡುಕಲು ಹೋಗದ್ದನ್ನು ತಾನೇಕೆ ಹುಡುಕಬೇಕು ಎಂದು ತಮ್ಮನ್ನು ತಾವು ಹೆಚ್ಚರಿಸಿಕೊಂಡಂತೆ, ಓದುಗರ ಮನಸ್ಸಿನ ಸಂಶಯಗಳಿಗೂ ಇದೇ ಉತ್ತರವಾಗುತ್ತದೆ.

ಇಡೀ ಕತೆಯ ಮೂಲ ವೆಂಕಟಿಗನ ಹೆಂಡತಿಯ ಅನೈತಿಕ ಸಂಬಂಧವಾದರೂ, ವೆಂಕಟಿಗ ತನ್ನ ವ್ಯಕ್ತಿತ್ವದ ಬಲದಿಂದ ಮತ್ತು ತನ್ನ ದೃಷ್ಟಿಕೋನದಿಂದ ಅವಳ ಸ್ವಭಾವವನ್ನು ಓದುಗನಿಗೆ ತೋರಿಸಿಕೊಡುವ ಮೂಲಕ ಅವಳ ಬಗ್ಗೆ ಒಂದು ಒಳ್ಳೆಯ ಅಭಿಪ್ರಾಯವನ್ನೇ ಮೂಡಿಸುತ್ತಾನೆ. ಅವನ ಹೃದಯ ವೈಶಾಲ್ಯತೆ ಇಲ್ಲಿ ಬಿಂಬಿಸಿದೆ. ಇಲ್ಲಿ ವೆಂಕಟಿಗನಿಗೆ ಆರ್ಥಿಕ ಬಡತನ ಇರಬಹುದು ಆದರೆ ಹೃದಯವಂತಿಕೆ ಶ್ರೀಮಂತವಾದದ್ದು. ಅವನ ವ್ಯಕ್ತಿತ್ವದಲ್ಲಿ ಅಂತರ್ಗತವಾಗಿರುವ ಘನತೆ ಮತ್ತು ಔದಾರ್ಯ ದೊಡ್ಡದು. ಸಮಾಜ ತನಗೆ ಮತ್ತು ತನ್ನ ಹೆಂಡತಿಗೆ ಎನನ್ನುತ್ತದೆ ಎಂಬುದನ್ನು ಪಕ್ಕಕ್ಕಿಟ್ಟು ತಾನು ತನ್ನ ಸಹಜ ಸ್ವಭಾವಕ್ಕನುಗುಣವಾಗಿ ಏನನ್ನು ಮಾಡಬಹುದಿತ್ತೋ ಅದನ್ನು ಮಾಡಿದೆ ಎನ್ನುತ್ತಾನೆ. ಸಾಮಾಜಿಕ ಕಟ್ಟುಕಟ್ಟಳೆಗಳು, ಸಂಪ್ರದಾಯಿಕ ನೀತಿ ನಿಯಮಗಳು ಬಿಗುವಾಗಿ ಇರುವ ಆ ಕಾಲದಲ್ಲಿಯೂ ಸಂಪ್ರದಾಯಿಕರಿಗೆ ಒಪ್ಪಿಗೆಯಾಗುವ ಧಾಟಿಯಲ್ಲಿ ಕತೆ ಎಣೆಯುವ ತಂತ್ರ ಮಾಸ್ತಿಯವರದಾಗಿದೆ.

ಮಾಸ್ತಿಯವರ ಕತೆಗಳನ್ನು ಓದುವ ಸಂಪ್ರದಾಯಸ್ತ ಓದುಗನೂ 'ಇವೆಲ್ಲ

ಸಹಜವಾಗಿ ಇವೆ' ಎಂಬುದನ್ನು ಕಷ್ಟವಿಲ್ಲದೆ ಒಪ್ಪಿಕೊಂಡಿದ್ದಾನೆ ಎಂದು ನನಗನಿಸುವುದಿಲ್ಲ. ಕತೆಯ ತಂತ್ರದಲ್ಲಿ ಮಾಸ್ತಿ ಬಳಸುವ ದೂರುಗಳು, 'ವೆಂಕಟಿಗನ ಹೆಂಡತಿ'ಯಂಥ ಕಥೆಗಳಲ್ಲಿ ಕಥೆಗೆ ಅವರು ಕಟ್ಟುವ ಪ್ರೇಮುಗಳು, ಉಪಾಯಗಳು ಅವಶ್ಯವಾಗುವುದು ಓದುಗನಿಗೆ ಪ್ರಾಯಶಃ ಇಲ್ಲದಿರುವ ಸಹಾನುಭೂತಿಯನ್ನು ಕುದುರಿಸಲೆಂದೆ ಹಿಗ್ಗಿಸಲೆಂದೇ ಎಂದು ನಾನು ತಿಳಿದಿದ್ದೇನೆ. ಮಾಸ್ತಿಯವರು ಕಠೋರ ಸಂಪ್ರದಾಯಸ್ಥರಲ್ಲ. ಹಂಗಿಲ್ಲದೆ ಹಬ್ಬುವ ಜೀವನದ ಬಳ್ಳಿಯನ್ನು ಕ್ರೂರವಾಗಿ ಕತ್ತರಿಸಿ ಬಿಡುವ ಒರಟುತನ ಅವರಿಗಿಲ್ಲ. ಉಲ್ಲಂಘಿಸುವ ಜನರನ್ನು ಸಾಕಷ್ಟು ದಯೆಯಿಂದಲೇ ನೋಡಿ ಕಡೆಗೆ ವೈಚಾರಿಕ ಮೌಲ್ಯಗಳನ್ನು ಎತ್ತಿಹಿಡಿದಿದ್ದಾರೆ.

ಮಾಸ್ತಿಯವರ ಕಥೆಗಳಲ್ಲಿ ಕನಿಕರ ಎಲ್ಲರಿಗೂ ಸಲ್ಲುತ್ತದೆಯಾದರೂ ಹೆಣ್ಣಿಗೆ ವಿಶೇಷವಾಗಿ ಸಲ್ಲುತ್ತದೆ. ಆಂಗ್ಲ ನೌಕಾ ಕ್ಯಾಪ್ಟನ್ನನ ಹೆಂಡತಿ ನೆಲ್ ಳಂತೆ ಒಂಟಿಯಾಗಿರಲಾರದೆ ಕೆಟ್ಟವರು, ಹಣಕ್ಕಾಗಿ ದೇಹವನ್ನು ಮಾರಿಕೊಳ್ಳುವ ವೇಶ್ಯೆಯರು– ಎಲ್ಲರಿಗೂ ಮಾಸ್ತಿಯವರು ಮರುಗುತ್ತಾರೆ. ಭಾವನೆಗಳಿಗೂ, ನೀತಿ–ನಿಯಮಗಳಿಗೂ ಹೋರಾಟ ನಡೆಯುವಂತಹ ವಸ್ತು ಮತ್ತು ಸನ್ನಿವೇಶಗಳನ್ನು ಮಾಸ್ತಿಯವರು ಕಥೆಗಾಗಿ ಆಯ್ದುಕೊಂಡಾಗ ಕೂಡ ಆ ಹೋರಾಟ ಕೇವಲ ಹೋರಾಟವಾಗಿ ಉಳಿಯದೆ, ಕಥೆ ದುರಂತವಾಗದೆ. ಕೊನೆಯಾಗುವಂತೆ ಮಾಡುತ್ತಾರೆ. ಇದಕ್ಕೆ ಉದಾಹರಣೆ 'ಆಂಗ್ಲ ನೌಕಾ ಕ್ಯಾಪ್ಟನ್'

ಇಂದಿನ ಸಮಾಜದ ದೃಷ್ಟಿಯಲ್ಲಿ ಕ್ಯಾಪ್ಟನ್ ಅಂತಸ್ತು ವೆಂಕಟಿಗನದಕ್ಕಿಂತ ಎಷ್ಟೋಪಟ್ಟು ಮೇಲಿನದು. ಅವನು ವಿದ್ಯಾವಂತ, ತಕ್ಕಮಟ್ಟಿಗೆ ದೊಡ್ಡ ಅಧಿಕಾರದಲ್ಲಿರುವವನು, ಸುಸಂಸ್ಕೃತನೂ ಹೌದು. ವೆಂಕಟಿಗನಿಗೆ ಬಂದ ಸಮಸ್ಯೆ ಅವನಿಗೂ ಬಂತು. ಅವನ ಹೆಂಡತಿ 'ನೆಲ್'ಳೂ ಬುದ್ಧಿಗೆಟ್ಟು ಪ್ರಕೃತಿ ಸಹಜವಾದ ಕಾಮದ ಆಸೆಗೆ ಬಿದ್ದು ಮನಸ್ಸನ್ನು ನಿಗ್ರಹಿಸಲಾರದೆ ಮತ್ತೊಬ್ಬನ ಜೊತೆ ಸೇರಿ ಗರ್ಭಿಣಿಯಾದಳು. ಅವಳ ಮನಸ್ಸು ಸೋತದ್ದು ಆ ಕ್ಷಣ ಮಾತ್ರ. ಆಗ ಅವಳಿಗೆ ತನ್ನ ತಪ್ಪಿನ ಅರಿವಾಗಿ ಹೆರಿಗೆಯ ಆಸ್ಪತ್ರೆಯಿಂದ ಗಂಡನಿಗೆ ಹೇಳಿ ಕಳುಹಿಸಿ ತಾನು ಮಾಡಿದ್ದು ತಪ್ಪು, ಅದಕ್ಕೆ ಪ್ರಾಯಶ್ಚಿತ್ತವಾಗಿ ವಿವಾಹ ವಿಚ್ಛೇದನ ಮಾಡಿಕೊಂಡರೆ ಅವನು ತನಗಿಂತ ಒಳ್ಳೆಯ ಹೆಂಗಸನ್ನು ಮದುವೆಯಾಗಬಹುದೆಂದು ಹೇಳಿ ಕೊನೆಯಲ್ಲಿ ಕ್ಯಾಪ್ಟನ್ ನ ಬೇಡಿಕೊಂಡಳು. ಕ್ಯಾಪ್ಟನ್ ನ ಮನಸ್ಸು ವೆಂಕಟಿಗನದರಷ್ಟು ಸರಳವಲ್ಲ. ವೆಂಕಟಿಗನಿಗೆ ತನ್ನ ಸ್ಥಾನಮಾನಗಳ ಯೋಚನೆ ಬರಲಿಲ್ಲ. ಆದರೆ ಕ್ಯಾಪ್ಟನ್‌ಗೆ ತಾನು ಇಷ್ಟು ಅಗ್ಗವಾದೆನೇ? ಎಂದು ಅವಮಾನವಾದಂತಾಯಿತು. ಆದರೂ ಅವನು ತನ್ನೊಡನೆ ತಾನು ಹೋರಾಟ ಮಾಡಿ ಗೆದ್ದು ದೊಡ್ಡತನವನ್ನೇ ತೋರಿಸಿದ. ಮತ್ತೆ ಎಂದಿನಂತೆ ಹೆಂಡತಿಯೊಡನೆ ಮತ್ತು ಅವಳ ಮಗುವಿನೊಡನೆ ಬಾಳಿದ.

ವೆಂಕಟಿಗನ ಮನಸ್ಸಿನಲ್ಲಿ ಯಾವ ಹೊಯ್ದಾಟವೂ ಇಲ್ಲದೆ ಮತ್ತೆ ಬಂದ ಹೆಂಡತಿಯನ್ನು ಸ್ವಾಗತಿಸಿದ. ಕಳೆದುಹೋದ ನಿಧಿಯನ್ನು ಮತ್ತೆ ಪಡೆದವನಂತೆ ಸಂತೋಷಪಟ್ಟ. ವೆಂಕಟಿಗನಲ್ಲಿ ಕಾಣುವುದು ಪ್ರೇಮದ ಮತ್ತು ಸಂತೋಷದ ಅಸ್ತಿತ್ವವನ್ನು. ಆದರೆ ಕ್ಯಾಪ್ಟನ್‌ನ ವಾತಾವರಣದಲ್ಲಿ ಮಾನಾಪಮಾನಗಳ ಪ್ರಶ್ನೆ, ಇವನು ಅಗ್ಗವಾದ ಎಂಬ ಭಾವನೆ ವೆಂಕಟಿಗನ ವಾತಾವರಣದಲ್ಲಿರುವುದಕ್ಕಿಂತ ಹೆಚ್ಚಾಗಿರುತ್ತದೆ. ಮಧ್ಯಮವರ್ಗದ ಸಮಾಜವು ಹೆಂಡತಿ ತಪ್ಪು ಮಾಡಿದಾಗ ಗಂಡನನ್ನು ನಿಕೃಷ್ಟವಾಗಿ ಕಾಣುತ್ತದೆ. ಅಂಥ ಹೆಂಡತಿಯ ವಿಷಯದಲ್ಲಿ ಔದಾರ್ಯವನ್ನು ತೋರುವ ಗಂಡನನ್ನು ಹೆದುರಿಗೆ ಅಲ್ಲದಿದ್ದರೂ ಬೆನ್ನ ಹಿಂದೆ ಹಾಸ್ಯಮಾಡಿ ನಗುವುದು. ಈ ಕಷ್ಟ ವೆಂಕಟಿಗನ ಸಮಾಜದಲ್ಲಿ ಇರಬಹುದಾದರೂ ಬಹಳ ಕಡಿಮೆ. ಅವನ ಔದಾರ್ಯ ಅಸ್ವಾಭಾವಿಕವಾಗಿ ಕಾಣದಂತೆ ಮಾಸ್ತಿಯವರು ಮೊದಲಿನಿಂದಲೂ ಅವನ ದೊಡ್ಡತನವನ್ನು ತೋರಿಸುವ ಪ್ರಯತ್ನ ಮಾಡಿದ್ದಾರೆ. ಒಟ್ಟಾರೆ 'ಆಂಗ್ಲ ನೌಕಾ ಕ್ಯಾಪ್ಟನ್' ನೂ ವೆಂಕಟಿಗನೂ ತಪ್ಪಿನಡೆದಿದ್ದ ಹೆಂಡತಿಯರೊಡನೆ ಮತ್ತೆ ಸಂಸಾರಹೂಡಿದರು. ಇಬ್ಬರ ವಿಷಯದಲ್ಲಿ ಅದು ಕೃತಕವೆನಿಸುವುದಿಲ್ಲ.

**ಮಾಸ್ತಿಯವರು ಕಥೆಗಳಲ್ಲಿ ಬಳಸುವ ತಂತ್ರಗಳು:**

ಬದುಕನ್ನು ಕಹಿ ಮಾಡಿಕೊಳ್ಳದೆ ನೋವನ್ನು ಗೆಲ್ಲುವದು ಹೇಗೆ ಎಂಬುದರಲ್ಲಿಯೇ ಮಾಸ್ತಿಯವರಿಗೆ ಹೆಚ್ಚಿನ ಆಸಕ್ತಿ ಇದ್ದಂಗಿದೆ. ವೈಯಕ್ತಿಕ ಸ್ಥೈರ್ಯದಿಂದ ಅಂತಃಶಕ್ತಿಯಿಂದ ನೋವನ್ನು ಗೆಲ್ಲಬಹುದೆಂಬ ವಿಶ್ವಾಸ ಅವರ ಕತೆಗಳಲ್ಲಿ ಎದ್ದು ಕಾಣುತ್ತದೆ. ವೆಂಕಟಿಗನ ಹೆಂಡತಿಯ ವೆಂಕಟಿಗ ಹೀಗೆ ಅನಿವಾರ್ಯವಾದ ನೋವನ್ನು ಗೆದ್ದವನಾಗಿದ್ದಾನೆ. ಅವನ ಬಗ್ಗೆ ಮಾಸ್ತಿಯವರಿಗೆ ವಿಶೇಷ ಆದರ. ನೋವು ಅನಿವಾರ್ಯವೇ ಆದಾಗ, ಸಮಾಜವ್ಯವಸ್ಥೆ ಹೇಗೇ ಇದ್ದರೂ, ವೈಯಕ್ತಿಕ ಧೀರೋದಾತ್ತತೆಯಿಂದ ಅದನ್ನು ಗೆಲ್ಲಬಹುದು ಎಂಬ ಧ್ವನಿ ಅವರ ಹೆಚ್ಚಿನ ಕತೆಗಳಲ್ಲಿ ಕಂಡುಬರುತ್ತದೆ. ಭಾವನೆಗಳಿಗೂ ನೀತಿ ನಿಯಮಗಳಿಗೂ ಹೋರಾಟ ನಡೆಯುವಂತಹ ವಸ್ತು ಮತ್ತು ಸನ್ನಿವೇಶಗಳನ್ನು ಮಾಸ್ತಿಯವರು ಕಥೆಗಾಗಿ ಆಯ್ದುಕೊಂಡಾಗ ಕೂಡ ಆ ಹೋರಾಟ ಕೇವಲ ಹೋರಾಟವಾಗಿ ಉಳಿಯದೆ, ಕಥೆ ದುರಂತವಾಗದೆ ಕೊನೆಯಾಗುವಂತೆ ಮಾಡುತ್ತಾರೆ. ಇದಕ್ಕೆ 'ಆಂಗ್ಲ ನೌಕಾ ಕ್ಯಾಪ್ಟನ್' ಮತ್ತು 'ವೆಂಕಟಿಗನ ಹೆಂಡತಿ' ಉದಾಹರಣೆಗಳು. ಇವೆರಡು ಕಥೆಗಳಲ್ಲೂ ಸ್ವಲ್ಪ ಹೆಚ್ಚು ಕಡಿಮೆ ಒಂದೇ ಬಗೆಯ ವಸ್ತುವಿದೆ. ಅಂತೆಯೇ ಮನುಷ್ಯ ಶಕ್ತಿಯನ್ನು ಮೀರಿ ನಿಲ್ಲುವ ನೋವು ಅವರ ಕತೆಗಳಲ್ಲಿ ಇಲ್ಲ. ಕುಟುಂಬ ವ್ಯವಸ್ಥೆಯ ಎಲ್ಲ ಬಿರುಕುಗಳಿಗೂ ಗಂಡೇ ಕಾರಣವೇ? ಹೆಣ್ಣಿನ ತಪ್ಪಿನಿಂದ ಗಂಡೂ ಪೇಚಿಗಿಟ್ಟುಕೊಳ್ಳುವುದಿಲ್ಲವೇ? ಹೆಣ್ಣಿನ ಒಳತೋಟಿಯನ್ನು ತೀವ್ರವಾಗಿ ದಾಖಲಿಸುವ ಮಾಸ್ತಿಯವರು ಕುಟುಂಬ ವ್ಯವಸ್ಥೆ ಉಳಿದು ಬರಲು ಹೆಣ್ಣಿಗೆ ತಾಳ್ಮೆ ಬೇಕು

ಎಂಬುದನ್ನು ಪ್ರತಿಪಾದಿಸುತ್ತಾರೆ. ಅವರ ಒಟ್ಟೂ ಆಶಯ ಮಾತ್ರ ಗಂಡು ಹೆಣ್ಣು ಕೂಡಿ ಬಾಳಿದರೆ ಸ್ವರ್ಗಸುಖ ಎನ್ನುವುದೇ ಆಗಿದೆ.

ಮಾಸ್ತಿಯವರ ಕತೆಗಳಲ್ಲಿ ಸನ್ಯಾಸಿಯ ಪೂರ್ವಾಶ್ರಮದ ಹೆಂಡತಿಗೆ ಸಂಬಂಧಿಸಿದ ಕತೆ 'ಆಚಾರ್ಯರ ಪತ್ನಿ'. ಈ ಕತೆಯಲ್ಲಿ ವ್ಯಕ್ತವಾಗುವ ಮಾನವೀಯತೆ ತಪ್ಪು ಮಾಡಿದಳೆಂದು ಅರ್ಧಾಂಗಿಯನ್ನು ತೊರೆದದ್ದೇನೋ ನಿಜ. ಆದರೆ ಆ ತೊರೆಯುವಿಕೆಯ ಪ್ರಕ್ರಿಯೆ ಅಷ್ಟು ಸರಳವಾದದ್ದಲ್ಲ. ಗಂಡ-ಹೆಂಡತಿ ಪರಸ್ಪರ ಅಗಲಿ ಎಷ್ಟೋ ವರ್ಷಗಳಾಗಿದ್ದರೂ ಹೆಂಡತಿಗೆ ಗಂಡನ ಬಗ್ಗೆ ಪ್ರೀತಿ-ಗೌರವಗಳು ಕಡಿಮೆಯಾಗುವುದಿಲ್ಲ. 'ಆಚಾರ್ಯರಿಗೆ ಜ್ವರ ಬಂದಾಗ ಈ ಜ್ವರವನ್ನು ತಾನು ಸ್ವೀಕರಿಸಿ ಆಕೆ ಸಾಯುತ್ತಾಳೆ, ಆಚಾರ್ಯರಿಗೆ ಹಲವರು ಕಾಲೊತ್ತುವ ಸೇವೆ ಮಾಡುತ್ತಿದ್ದರೂ ಎಷ್ಟೋ ವರ್ಷಗಳ ಹಿಂದಿನ ಹೆಂಡತಿ ಇವರ ದೇಹವನ್ನು ಸ್ಪರ್ಶಿಸುವಾಗ ದೈಹಿಕ ಸ್ಪರ್ಶಕ್ಕೆ ಇರುವ ಪಾವಿತ್ರ್ಯದ ಆತ್ಮೀಯ ನೆಲೆ ಹೊಳೆಯುತ್ತದೆ. ಅವರಿಗೆ ಸ್ಪರ್ಶದ ವ್ಯತ್ಯಾಸದ ಅನುಭವವಾಗಿಬಿಡುತ್ತದೆ. ಅಂದರೆ ಆಚಾರ್ಯರ ಸನ್ಯಾಸಿತನವೇ ಪೆಚ್ಚಾದಂತೆ ತೋರುತ್ತದೆ.

'ಗೌತಮಿ ಹೇಳಿದ ಕಥೆ'ಯಲ್ಲಿ ನಮ್ಮನ್ನು ಆಳವಾಗಿ ಕಲಕುವುದು ಕುಲಪತಿಗಳ ನಿಗ್ರಹ ಮಾತ್ರವಲ್ಲ ಗೌತಮಿಯ ಅದಮ್ಯವಾದ ಕಾಮ. ಇದು ಅದಮ್ಯ ಯಾಕೆಂದರೆ ಈ ಕಾಮವೇ ಅವಳನ್ನು ಶಕುಂತಲೆಯ ಕೊಂಚ ಮಟ್ಟಿನ ಬಂಡಾಯದ ಪ್ರೇಮ ಪ್ರಕರಣಕ್ಕೆ ಸಹಾನುಭೂತಿ ಯುಳ್ಳವಳೂ ಸಹಾಯಕಳೂ ಆಗುವಂತೆ ಮಾಡಿದ್ದು. ಕಾಮದ ಶಕ್ತಿ ಆಕರ್ಷಣೆ ಯಾವ ಸ್ವರೂಪದ್ದು ಎಷ್ಟು ತೀವ್ರವಾದದ್ದು, ಎಷ್ಟು ಆತ್ಮೀಯವಾದದ್ದೆಂದು ಸೂಚಿಸುವ ಗೌತಮಿ ಹೇಳಿದ ಕಥೆ, ಆಚಾರ್ಯರ ಪತ್ನಿ ಇಂತಹ ಕಥೆಗಳಲ್ಲಿ ಕಾಣಬಹುದು. ಇಲ್ಲಿ ಮಾಲಿನಿ ಕಾಡುವ ಪಾತ್ರವಾಗುತ್ತಾಳೆ. ಹಾಗೆಯೆ ದತ್ತ ಅಥವಾ ಕಣ್ವ ಮಹರ್ಷಿಯೂ ಸಹ. ಒಂದು ಕತೆ, ಅನುಭವ ಒಬ್ಬ ಲೇಖಕನಲ್ಲಿ ಕ್ರಮೇಣವಾಗಿ ಮಾಗುವ, ವಿಕಾಸವಾಗುವ ಪರಿಯನ್ನು ಗಮನಿಸಲು ಈ ಕಥೆಗಳನ್ನು ಗಮನಿಸಲಾಗಿದೆ.

ಮಾಸ್ತಿ ಕಥೆಗಳು ಮನುಷ್ಯನ ವೈವಿಧ್ಯಮಯ ಸಂಬಂಧಗಳನ್ನು ಸಾವಧಾನದಿಂದ, ಸಹಾನುಭೂತಿಯಿಂದ ಪರಿಶೀಲಿಸುತ್ತವೆ. ಸಮಾಜ ಒಪ್ಪಿಕೊಂಡ ನೈತಿಕ ಕಟ್ಟುಪಾಡುಗಳನ್ನು ಬೇರೆ ಬೇರೆ ಬಗೆಗಳಲ್ಲಿ ಉಲ್ಲಘಿಸುವ ವ್ಯಕ್ತಿಗಳನ್ನು ಅವರು ತಿರಸ್ಕರಿಸುವುದಿಲ್ಲ ಮತ್ತು ಈ ಕಾರಣಗಳಿಂದ ಹುಟ್ಟುವ ದಾಂಪತ್ಯದ ಬಿರುಕುಗಳು ಶಾಶ್ವತವಾಗಿರಬೇಕೆಂದು ಅವರು ಬಯಸುವುದಿಲ್ಲ. ಮುರಿದು ಹೋಗುವ ಸಂಸಾರಗಳು ಮತ್ತೆ ಹೊಂದುಗೂಡುವ ಸಂದರ್ಭಗಳನ್ನು ಅವರು ಗೌರವದಿಂದ ಮೆಚ್ಚುಗೆಯಿಂದ ಎತ್ತಿ ಹಿಡಿಯುತ್ತಾರೆ. ಇದು ಸುಲಭಸಾಧ್ಯ ಎಂದೇನೂ ಅವರು

ಪ್ರತಿಪಾದಿಸುವುದಿಲ್ಲ. ಯಾರೊಬ್ಬರ ಅನೀತಿಯಿಂದ ಸಂಸಾರ ಹೊಡೆದು ಹೋದಾಗ ಅದರ ಸಂಕಟಗಳನ್ನು ಅನುಭವಿಸುವ ವ್ಯಕ್ತಿಗಳನ್ನು ಅವರು ತೀವ್ರವಾದ ಕರುಣೆಯಿಂದ ಗಮನಿಸುತ್ತಾರೆ. ಅವರ ದುರಂತಕ್ಕಾಗಿ ಮರುಗುತ್ತಾರೆ. ಹಾಗೆಯೇ ಜೀವನದ ಕಹಿ ಅನುಭವಗಳಿಂದ ವ್ಯಕ್ತಿಗಳು ಪಕ್ವವಾಗಿ ವಿವೇಕ ಪಡೆಯುವ ಈ ವಿವೇಕದಿಂದ ಅವರ ಮುರಿದುಹೋದ ಸಂಸಾರವನ್ನು ಕಟ್ಟಿಕೊಳುವ ಅವರ ಔದಾರ್ಯಕ್ಕೆ ನಮಿಸುತ್ತಾರೆ.

ಅಂತರ್ಜಾತಿ ಪ್ರೇಮ ಸಂಬಂಧಗಳನ್ನೂ ಮಾಸ್ತಿ ಕಥೆಗಳು ನಿರಾಕರಿಸುವುದಿಲ್ಲ. 'ವೆಂಕಟಶಾಮಿಯ ಪ್ರಣಯ'ದಲ್ಲಿ ನಾಯಿಂದರ ಹುಡುಗ ದೊಂಬರ ಹುಡುಗಿಯ ಪ್ರೇಮವು ದುರಂತದಲ್ಲಿ ಕೊನೆಗೊಳ್ಳುತ್ತದೆ. ವೆಂಕಟಶಾಮಿ ಈ ಹುಡುಗಿಯ ಹಿಂದೆ ಹೋಗುವುದು, ಅವಳನ್ನು ಮದುವೆಯಾಗಲು ಹಂಬಲಿಸುವುದು. ಅಂತಹ ಮದುವೆ ಊರ್ಜಿತವಾಗಬೇಕಾದರೆ ಬೆಂಗಳೂರಿನಂತ ಪಟ್ಟಣವೇ ಸರಿಯೆಂದು ತಾಯಿ–ತಂದೆ ಜೊತೆ ವಾದಿಸುವುದು, ಮುನಿಸಿಕೊಳ್ಳುವುದು. ಇಲ್ಲಿ ನಿರೂಪಕನು ಹೇಳುವಂತೆ ನಾಯಿಂದರ ಆ ಹುಡುಗನು ದೊಂಬರ ಆ ಹುಡುಗಿಯು ಪರಸ್ಪರ ಪ್ರೇಮದಲ್ಲಿ ಈ ದಾರಿಯಲ್ಲಿ ಆ ಕೆರೆಯ ಬಳಿ, ಆ ಕಾರೆಯ ಗಿಡದಲ್ಲಿ, ಇಲ್ಲಿ ಹೊಲದ ಬಳಿಯ ಚೌಕದಲ್ಲಿ ಸುತ್ತಾಡಿದ ರೀತಿಯನ್ನು ನೀವು ಊಹಿಸುವುದಾದರೆ ಹುಡುಗನಿಗೆ ಜ್ವರ ಬಂದು ಅವನ ಸಾವಿನಿಂದ ಆ ಪ್ರಣಯ ಮುಗಿಯಿತೆನ್ನುವುದನ್ನು ನೆನೆಯುವಿರಾದರೆ ಅವನಿಗಾಗಿಯೂ ಅವನನ್ನು ಕಳೆದುಕೊಂಡ ಆ ಹುಡುಗಿಗಾಗಿಯೂ ನಿಮ್ಮ ಮನಸ್ಸು ಕರಗುವುದೆಂದು ನನ್ನ ನಂಬಿಕೆ. 'ವೆಂಕಟಶಾಮಿಯ ಪ್ರಣಯ' ಮಾಸ್ತಿಯವರ ಲವಲವಿಕೆ ಕಥೆಗಳಲ್ಲಿ ಒಂದು. ಕತೆಯ ಕೊನೆಯಲ್ಲಿ ಬರುವ ಸಾವಿನಿಂದಾಗಿ ಈ ಕತೆಯ ನಿರೂಪಣೆಯಲ್ಲಿರುವ ಲವಲವಿಕೆ, ಹಾಸ್ಯ ಇವುಗಳನ್ನೆಲ್ಲ ಮರೆತು ಬಿಡುವ ಸಾಧ್ಯತೆಯಿದೆ. ಈ ಕತೆ ಆ ಗ್ರಾಮದಲ್ಲಿ ಆ ದಿನಗಳಲ್ಲಿ ಮಾತ್ರ ನಡೆಯಬಹುದಾಗಿದ್ದ ನೈಜಕತೆ ಎಂಬ ಭಾವನೆಯನ್ನು ಕೂಡ ಹುಟ್ಟಿಸುತ್ತದೆ. ಈ ಕತೆಯನ್ನು ಸಾವಿನ ಮೂಲಕ ಒಬ್ಬ ಮನುಷ್ಯ ಬದುಕನ್ನು ಸಾರ್ಥಕಪಡಿಸಿಕೊಳ್ಳಬಹುದಾದ ಕತೆಯನ್ನಾಗಿಯೂ ನೋಡಬಹುದು.

**ಕತೆಗಳಲ್ಲಿ ಕೌಟುಂಬಿಕ ಸಫಲತೆ:**

ಬದುಕಿನಲ್ಲಿ ದುಃಖ ನೋವು ಇಲ್ಲವೆಂದು ಅವರ ಅಭಿಪ್ರಾಯವಲ್ಲ. ಈಗಿರುವ ಸಮಾಜ ವ್ಯವಸ್ಥೆಯಲ್ಲಿ ಎಲ್ಲವೂ ಸರಿಯಾಗಿದೆಯೆಂದೂ ಅವರು ಭಾವಿಸುವುದಿಲ್ಲ. ಆದರೆ ಈಗಿರುವ ವ್ಯವಸ್ಥೆಯನ್ನು ಬದಲಾಯಿಸುವುದರಿಂದ ಎಲ್ಲವೂ ಸರಿಯಾದೀತೆಂದು ಅವರು ನಂಬುವುದಿಲ್ಲ. ಅಂತೆಯೇ ಅವರು ತಮ್ಮ ಕತೆಗಳಲ್ಲಿ ವ್ಯವಸ್ಥೆಯನ್ನು ಉಗ್ರವಾಗಿ ಪ್ರಶ್ನಿಸುವುದಿಲ್ಲ. ಅಮೂಲಾಗ್ರವಾದ ಸಾಮಾಜಿಕ ಬದಲಾವಣೆಯ ಕಡೆಗೆ ತುಡಿಯುವುದಿಲ್ಲ. ಅವರು ಹೆಚ್ಚಾಗಿ ಚಿತ್ರಿಸಿದ್ದು ಗಂಡು–

ಹೆಣ್ಣುಗಳ ಸಂಬಂಧಗಳನ್ನು, ಈ ಸಂಬಂಧಗಳು ಸಮಾಜ ವ್ಯವಸ್ಥೆಯೊಡನೆ ನಿಕಟವಾಗಿ ಸಂಬಂಧಿಸಿದಾಗಲೂ ಮಾಸ್ತಿಯವರು "ವೆಂಕಟಶಾಮಿಯ ಪ್ರಣಯ" ದಲ್ಲಿಯಂತೆ ಸಮಸ್ಯೆಯ ಸಾಮಾಜಿಕ ಮೂಲಕ್ಕೆ ಹೋಗದೆ ವೈಯಕ್ತಿಕ ಸಂಬಂಧಗಳ ಮೇಲೆಯೇ ದೃಷ್ಟಿ ಹರಿಸುತ್ತಾರೆ. ಇದು ಮಾಸ್ತಿಯವರ ಕತೆಗಳ ಒಂದು ನೀತಿ.

ಹಾಗೆಯೇ, ಮಾಸ್ತಿ ಕಥಾಪರಂಪರೆ ಎಂದರೆ ಕೇವಲ ಕಥೆ ಹೇಳುವ ರೀತಿಯಲ್ಲ; ಜೀವನವನ್ನು ಕಾಣುವ ದೃಷ್ಟಿಯೂ ಹೌದು. ಮಾಸ್ತಿಯವರಿಗೆ ಬದುಕಿನಲ್ಲಿಯ ಜೀವಪರವಾದ ಶಕ್ತಿಗಳ ಬಗ್ಗೆ ಗೌರವವಿದೆ. ಉದಾರವಾದ ಭಾರತೀಯ ಮನಸ್ಸಿನಿಂದ ಅವರು ಸಂಗತಿಗಳನ್ನು ಗ್ರಹಿಸುತ್ತಾರೆ. ಆದರೆ ಅದು ಜಡ ಅರ್ಥದಲ್ಲಿ ಸಾಂಪ್ರದಾಯಿಕ ಮನಸ್ಸಲ್ಲ. ವಿಚಿತ್ರ ಪ್ರೇಮದಂಥ ವಿಲಕ್ಷಣ ಪ್ರಸಂಗವನ್ನು ವೆಂಕಟಶಾಮಿಯ ಪ್ರಣಯದಂಥ ಕತೆಗಳಲ್ಲಿ ಸಹಾನುಭೂತಿಯಿಂದ ಚಿತ್ರಿಸಬಲ್ಲ ಮನಸ್ಸನ್ನು ಸಾಂಪ್ರದಾಯಿಕ ಎಂದು ಕರೆಯುವುದು ಸುಲಭವಲ್ಲ. ಅವರದು ಮುಖ್ಯವಾಗಿ ಉದಾರ ಮಾನವತಾವಾದದ ದೃಷ್ಟಿ.

ಶುದ್ಧ ಹಾಸ್ಯದ ಕಣ್ಣಿನಲ್ಲಿ ಕಂಡ "ರಂಗನ ಮದುವೆ", "ರಂಗಪ್ಪನ ದೀಪಾವಳಿ", "ರಂಗಪ್ಪನ ಕೋರ್ಟ್ಷಿಪ್", "ವೆಂಕಟರಾಯನ ಪಿಶಾಚ" ಇದು ಮೋಜಿನ ದೆವ್ವದ ಕಥೆ. ಸುಪ್ತ ಮನಸ್ಸಿನಲ್ಲಿದ್ದ ಭೂತದ ಭಯ ಕನಸಾಗಿ ಕಾಡಿದ ಕಥೆ. ಈ ಕಥೆಗಳು ಗ್ರಾಮ ಜೀವನದ ಮೂರು ಸಾಮಾಜಿಕ ಪ್ರಹಸನಗಳಾಗಿ ಇವು ಕಂಗೊಳಿಸುತ್ತವೆ. ಇವು ಮಾಸ್ತಿಯವರ ಅಭಿವ್ಯಕ್ತಿ ಶಕ್ತಿಗೆ ನಿದರ್ಶನಗಳಾಗಿವೆ. ಇವರು ತಮ್ಮ ಕತೆಗಳಲ್ಲಿ ಸಂಪ್ರದಾಯಿಕ ಮೌಲ್ಯಗಳನ್ನು ಹಿಡಿದಿಡುವುದರ ಜೊತೆಗೆ ತಮ್ಮ ಜೀವನಾನುಭವವನ್ನು ಓರೆಗಲ್ಲಿಗೆ ಹಚ್ಚಿ ನೋಡಿದ್ದಾರೆ. 'ರಂಗನ ಮದುವೆ' ಇವರ ಮೊದಲ ಕತೆ. ಆ ಕತೆಯಲ್ಲಿ ಇಂಗ್ಲೀಷ್ ಶಿಕ್ಷಣವನ್ನು ಪಡೆದರೂ ರಂಗ ಹಿರಿಯರು ಒಪ್ಪಿದ ಹುಡುಗಿಯ ಜೊತೆ ಮದುವೆಯಾಗುತ್ತಾನೆ. ವಿಷಯದಲ್ಲಿ ಮೊದಲು ಆಶಾಭಂಗವಾಗುವಂತೆ ಮಾಡಿ ಆಸಕ್ತಿಯನ್ನು ಹೆಜ್ಜೆ ಹೆಜ್ಜೆಗೂ ಕೆರಳಿಸಿ ಕೊನೆಗೆ ಅವನಿಗೆ ಮದುವೆ ಮಾಡಿಸುವ ಚಾತುರ್ಯ ಮೆಚ್ಚುವಂತದ್ದು. ರಂಗಪ್ಪನ ದೀಪಾವಳಿ: ಈ ಕತೆಯಲ್ಲಿ ಮೊದಲ ದೀಪಾವಳಿಗೆಂದು ಮಾವನ ಮನೆಗೆ ಬಂದ ರಂಗಪ್ಪ ತನ್ನ ಹೆಂಡತಿಯನ್ನು ಮಾತನಾಡಿಸಲು ಪಡಬಾರದ ಕಷ್ಟಪಟ್ಟು ಸಾಹಸಮಾಡಿ ಹೆಂಡತಿಯನ್ನು ಮಾತನಾಡಿಸಿದ. "ಬೆಳಿಗ್ಗೆ ಮನೆಗೆ ಬಂದವರು ನನ್ನಕೂಡ ಮಾತನಾಡುವುದಕ್ಕೆ ಈಗಲೇ ಬರುವುದು" ಎಂಬ ಉತ್ತರ ಕೇಳಿ ದಂಗಾದನು. ಅಂದರೆ ನನ್ನ ಹೆಂಡತಿ ಒಂದು ಕಲ್ಪನೆಯಲ್ಲ ನನ್ನಂತೆ ಮಿಡಿಯುವ ಒಂದು ಜೀವ ಎಂಬುದನ್ನು ಅರಿತನು ಆದ್ದರಿಂದ ರಂಗಪ್ಪನ ದೀಪಾವಳಿ ತೊಳಗಿ ಬೆಳಗಿತು. ಇದು ಸಾಮಾನ್ಯ ಘಟನೆ. ಆದರೆ ಅದನ್ನು ನಿರೂಪಿಸುವ ರೀತಿಯಲ್ಲಿಯೇ ಕಲೆ ಬೆಳಗಿ ಕತೆಯಾಗಿದೆ. "ರಂಗಪ್ಪನ ಕೋರ್ಟ್ಷಿಪ್" ಹಾಸ್ಯದ ಒಂದು ಚಿನ್ನದ ಗಟ್ಟಿ. ರಂಗಪ್ಪ ರೊಮಾನ್ಸ್ ನ ಪ್ರಪಂಚದ

ನಿರಂತರ ನಿವಾಸಿ ಹೆಂಡತಿಯ ಕಾಗದಕ್ಕಾಗಿ ಚಾತಕ ಪಕ್ಷಿಯಂತೆ ಕಾದಿದ್ದಾನೆ. ಆಗ ಹೆಂಡತಿ ರತ್ನಳ ಕಾಗದ ಬಂತು ಗಂಡನಿಗೆ ತೀರ್ಥ ರೂಪು ಎಂದು ಬರೆದ ಹೆಂಡತಿಯ ಕಾಗದಕ್ಕಾಗಿ ಕುದಿಯುವ ಗಂಡ ಇವರ ಎಳೆಯ ಅರಳುತ್ತಿರುವ ಮುಗ್ದಪ್ರೇಮದ ಜಗತ್ತು ಇಲ್ಲಿ ಶ್ರೀನಿವಾಸರ ಹಾಸ್ಯ ಸ್ವಭಾವವನ್ನು ಕಾಣಬಹುದು. ಇಂತಹ ಸಾಮಾನ್ಯ ಘಟನೆಯನ್ನು ಸೃಷ್ಟಿಸಿದ ವಾತಾವರಣ ಮನಸ್ಸು ತುಂಬಿ ಸರಳತೆಯೇ ಸೊಬಗಾಗಿ ಮೂಡಿದೆ.

ಆಧುನಿಕ ಸಮಾಜವನ್ನೇ ಕುರಿತ ಕಥೆ ''ರಂಗಸಾಮಿಯ ಅವಿವೇಕ''. ಇಲ್ಲಿ ರಂಗಸಾಮಿಯ ಭಾವನೆಗಳೆಲ್ಲಾ ಹಂತ ಹಂತವಾಗಿ ಮೇಲೇರುತ್ತಾ ಹೋಗುತ್ತವೆ. ಗೆಳೆಯನ ಹೆಂಡತಿಯ ಚರ್ಯೆಗಳನ್ನೆಲ್ಲಾ ತನಗನುಕೂಲವಾಗುವಂತೆ ಹೊಂದಿಸಿಕೊಳ್ಳುತ್ತಾನೆ. ಕೊನೆಗೆ ಆಕೆಯನ್ನು ಹಿಡಿಯಲು ಹೋದಾಗ 'ಸೀತೆಯ ಪುಣ್ಯಕ್ಕೆ ಎಣೆಯೇ ಇಲ್ಲ' ಎಂದು ಆಕೆ ಹೇಳುವ ಮಾತು ಸಿಡಿಲಿನಂತ ಪೆಟ್ಟನ್ನು ರಂಗಸಾಮಿಗೆ ಕೊಡುತ್ತದೆ. ಸೀತೆ ತನಗೆ ತಕ್ಕವಳಲ್ಲ ಎಂದು ಭಾವಿಸಿದ್ದ ಗಂಡು ಕೊನೆಗೆ 'ಸೀತೆಗೆ ಇದುವರೆಗೆ ತಕ್ಕ ಗಂಡನಾಗಿದ್ದೆ' ಇಂದು ಅಯೋಗ್ಯನಾದೆ, 'ಅವಳಂತ ಹುಡುಗಿಗೆ ನನ್ನಂತ ಪಾಪಿಯೇ ಯಜಮಾನನು' ಎಂದು ಅಳುವುದು ಅದ್ಭುತ ಪರಿಣಾಮಕಾರಿಯಾಗಿದೆ. ಈ ಕಥಾ ನಿರೂಪಣದಲ್ಲಿ ಮಾಸ್ತಿಯವರು ಮನುಷ್ಯ ಸ್ವಭಾವದ ಸೂಕ್ಷ್ಮ ವ್ಯಾಪಾರವನ್ನು ತಿಸಿದ್ದಾರೆ. ಇವರ ಕಥೆಗಳಲ್ಲಿ ಅಂತರ್ಗತವಾಗಿರುವ ಸಮಾನತೆ, ಸ್ತ್ರೀ ಸ್ವಾತಂತ್ರ್ಯದ ಹೊಸ ದೃಷ್ಟಿಕೋನ ಮತ್ತು ನಮ್ಮ ಸುತ್ತಲ ಬದುಕನ್ನು ನಮ್ಮ ಅನುಭವಕ್ಕೆ ತಂದುಕೊಳ್ಳಬೇಕಾದರೆ ಬದುಕು ಇರುವ ರೀತಿಯಲ್ಲೇ ನೋಡುವುದು ಅವರ ಜೀವನಾನುಭವವನ್ನು ಸೂಚಿಸುತ್ತದೆ.

ನಮ್ಮ ಮೇಷ್ಟರು ಎಂಬ ಕಥೆಯಲ್ಲಿ ಮೇಷ್ಟರ ಹೆಂಡತಿಯ ವಿಷಯ ತಿಳಿದರೆ ಮೇಷ್ಟರ ವಿಷಯ ತಿಳಿದಂತೆ ಆಗುತ್ತದೆ. ಇಲ್ಲಿ ಸ್ತ್ರೀಯ ಪ್ರಾಧಾನ್ಯವನ್ನು ಹೆಚ್ಚಿಸಿ ಆ ಮೂಲಕ ಪುರುಷನ ಪರಿಚಯ ಮಾಡಿಸುವುದು ಶ್ರೀನಿವಾಸರ ಮಾರ್ಗ. 'ಬೀದಿಯಲ್ಲಿ ಹೋಗುವ ನಾರಿ' ಜನ ದೇಹದ ದೌರ್ಬಲ್ಯದಿಂದ ವ್ಯಭಿಚಾರ ಮಾಡುತ್ತಾರೆ. ಅದರ ಫಲವಾಗಿ ಹುಟ್ಟಿದ ಮಕ್ಕಳನ್ನೂ ಸಹ ತಮ್ಮ ಮಕ್ಕಳೆಂದುಕೊಳ್ಳುವುದಿಲ್ಲ. ತಮ್ಮ ಪಾಪದ ಫಲವನ್ನು ಮತ್ತೆ ಪಾಪ ಮಾಡಲು ಬಿಡುತ್ತಾರೆ. ಹೋಗುವುದು ವೇಶ್ಯೆಯ ಮನೆಗೆ. ಮನೆಯಲ್ಲಿ ನನ್ನ ಹೆಂಡತಿ ಒಳ್ಳೆಯವಳು. ನನ್ನ ಹೆಣ್ಣು ಮಕ್ಕಳು ಸತ್ಯವಂತರು ಎಂಬ ಜಂಭ. ಇದು ಮನುಷ್ಯನ ಅಜ್ಞಾನವೇ ಹೊರತು ಬೇರೆಯಲ್ಲ. ಮನೆಯ ಹೊರಗಡೆ ಇರುವ ಮಗಳು ವೇಶ್ಯೆಯಾದರೂ ಕಾಣಿಸುವುದಿಲ್ಲ. ಈ ಯೋಚನೆ ವೇಶ್ಯಾವಾಟಿಗೆ ಹೋಗುವವರಿಗೆ ಗೊತ್ತಾಗುವುದಿಲ್ಲವಲ್ಲ ಎಂಬುದೇ ಮಾಸ್ತಿಯವರ ಕೊರಗು. ಸಮಾಜವನ್ನು ಮಾಸ್ತಿಯವರು ಚೆನ್ನಾಗಿ ಅರಿತವರಾಗಿದ್ದರು ಎನ್ನುವುದು ಈ ಕತೆ ಮೂಲಕ ತಿಳಿಯುತ್ತದೆ.

ಮಾಸ್ತಿಯವರ ಕತೆ 'ಮೊಸರಿನ ಮಂಗಮ್ಮ'. ಈ ಕತೆಯಲ್ಲಿ ಮಂಗಮ್ಮನ ಪಾತ್ರವನ್ನು ಅವಳ ವೃತ್ತಿ ಓಡಾಟ ಮಾತುಕತೆಗಳ ಮೂಲಕ ಪರಿಚಯಿಸುತ್ತಾ, ಆಕೆಗಿದ್ದ ಯಜಮಾನಿಕೆಯ ಹಂಬಲ ಮತ್ತು ಕುಟುಂಬದವರನ್ನು ಪ್ರೀತಿಸುತ್ತಲೇ ಅವರ ಮೇಲೆ ದಬ್ಬಾಳಿಕೆಯನ್ನು ನಡೆಸಬೇಕೆನ್ನುವ ಸ್ವಭಾವವನ್ನು ಪರಿಚಯಿಸುತ್ತಾರೆ. ಇಲ್ಲಿ ಅತ್ತೆ ಸೊಸೆಯ ಮಧ್ಯೆ ಬಿಕ್ಕಟ್ಟು ಉದ್ಭವಿಸಿದಾಗ ಅತ್ತೆ ಸೊಸೆ ಬೇರೆಯಾಗುತ್ತಾರೆ. ಆಗ ಜಗಳದ ತೀವ್ರತೆ ಕಡಿಮೆಯಾಗುತ್ತದೆ. ಮಂಗಮ್ಮ ಮಗ ಸೊಸೆಯಿಂದ ಬೇರೆಯಾಗಿ ಹೊಸ ವಿಧದ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಮನೆಯ ಹೊರಗಡೆ ಆಕೆಗೆ ಎದುರಾಗುವ ಸವಾಲುಗಳು ಒಳಗಡೆಯ ಸವಾಲುಗಳಿಗಿಂತ ಭೀಕರವಾದುದರಿಂದ ಮಂಗಮ್ಮ ಮತ್ತೆ ಮನೆಯತ್ತಲೇ ವಾಲುತ್ತಾಳೆ. ಇಲ್ಲಿ ಮಾಸ್ತಿಯವರು ಅತ್ಯಂತ ಸೂಕ್ಷ್ಮವಾಗಿ ಕಥಾವಸ್ತುವನ್ನು ನಿರ್ವಹಿಸಿ ಮಂಗಮ್ಮನನ್ನು ಮನೆಯೊಳಕ್ಕೆ ಸೇರಿಸಿಬಿಡುತ್ತಾರೆ. ಇಂತಹ ಕತೆಗಳಲ್ಲಿ ಮಾಸ್ತಿಯವರು ಸಮಾಜದ ಓರೆಕೋರೆಗಳ ಮೇಲು ಪದರವನ್ನು ಸರಿಪಡಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದಾರೆ.

ಉಪಸಂಹಾರ:

ಒಟ್ಟಾರೆ ಮಾಸ್ತಿಯವರ ಎಲ್ಲ ಕಥೆಗಳಲ್ಲಿ ಸರಳತೆಗೆ ಮೊದಲ ಆದ್ಯತೆ. ಸಾಧಾರಣ ಮಾತುಗಳಿಂದ ಅಸಾಧಾರಣ ಚಿತ್ರ ನಿರ್ಮಿಸುವ ಕಲೆ ಅವರದು. ಹೀಗೆ ಬರೆಯುವಲ್ಲಿ ತಮಗೆ ಯಾವ ವ್ಯಕ್ತಿತ್ವ ಪ್ರಿಯವಾಯಿತೋ ಆ ವ್ಯಕ್ತಿತ್ವ ಓದುಗರಿಗೂ ಪರಿಚಯವಾಗುವ ಹಾಗೆ ಬರೆಯುತ್ತಾರೆ. ತಮ್ಮ ಕಥೆಗಳ ಮೂಲಕ ಓದುಗರನ್ನು ಬೌದ್ಧಿಕವಾಗಿ, ಭಾವನಾತ್ಮಕವಾಗಿ ಬೆಳೆಸಲು ಮತ್ತು ಮೌಲ್ಯಗಳನ್ನು ಒತ್ತಿ ಹೇಳಲು ಕಥಾ ಸಾಹಿತ್ಯ ಮಾಧ್ಯಮವನ್ನು ಬಳಸಿದರು. ಸಮಾಜದ ವಿವಿಧ ಶ್ರೇಣಿಗಳಾದ ಬಡವ-ಶ್ರೀಮಂತ, ವಿದ್ಯಾವಂತ-ಅನಕ್ಷರಸ್ತ, ರೈತಾಪಿ ಜನ-ಅಧಿಕಾರಿವರ್ಗ ಹೀಗೆ ಜನಸಾಮಾನ್ಯರ ಮತ್ತು ಅಸಾಮಾನ್ಯರ ಬದುಕಿನ ನೋವು-ನಲಿವುಗಳನ್ನು ಕಣ್ಣಾರೆ ಕಂಡಿದ್ದ ಅವರು ಬರೆದ ಕಥೆಗಳಲ್ಲಿ ಮತ್ತು ಅದರಲ್ಲಿ ಬರುವ ಪಾತ್ರಗಳಲ್ಲಿ ವೈವಿಧ್ಯತೆ ಇದೆ. ಮಾಸ್ತಿಯವರು ಈ ನೇರ ಸರಳ ಕಥೆಗಳಲ್ಲಿ ಸಂಸ್ಕೃತಿಯ ಹಿರಿಮೆ ಮತ್ತು ಮೌಲ್ಯ ವಿವೇಚನೆಯನ್ನು ಕಾಣಬಹುದು. ಅದು ಅವರು ಜೀವನವನ್ನು ಗ್ರಹಿಸುವ ರೀತಿಯೂ ಹೌದು. ಅವಸರ ಅಬ್ಬರಗಳಿಲ್ಲದ ಸಮಾಧಾನದ ಬರವಣಿಗೆ ಅವರ ಮನೋಧರ್ಮಕ್ಕೂ ಹಿಡಿದ ಕನ್ನಡಿಯಾಗಿದೆ. ಒಟ್ಟಾರೆ ಮಾಸ್ತಿಯವರ ವಿಶಿಷ್ಟ ಮನೋಧರ್ಮವೇ ಅವರ ಬರವಣಿಗೆಯ ರೀತಿಯನ್ನು ನಿರ್ಧರಿಸಿದೆ ಎನ್ನಬಹುದು.

**ಪರಾಮರ್ಶನ ಗ್ರಂಥಗಳು:**


1. ನಾಯಕ ಜಿ. ಎಚ್. (1988). ನಿಜದನಿ. ಅಕ್ಷರ ಪ್ರಕಾಶನ. ಹೆಗ್ಗೋಡು.
2. ಶ್ರೀನಿವಾಸ. (1966). ಸಣ್ಣ ಕತೆಗಳು: ಭಾಗ–02. ಜೀವನ ಕಾರ್ಯಲಯ. ಬೆಂಗಳೂರು.
3. ಶ್ರೀನಿವಾಸ. (1979). ಸಣ್ಣ ಕತೆಗಳು: ಭಾಗ–9. ಜೀವನ ಕಾರ್ಯಲಯ. ಬೆಂಗಳೂರು.
4. ಶ್ರೀನಿವಾಸ. (1979). ಸಣ್ಣ ಕತೆಗಳು: ಭಾಗ–10. ಜೀವನ ಕಾರ್ಯಲಯ. ಬೆಂಗಳೂರು.
5. ಅಶೋಕ ಟಿ. ಪಿ. (1990). ಸಾಹಿತ್ಯ ವಿಮರ್ಶೆ. ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು.
6. ಸತ್ಯನಾರಾಯಣ ಕೆ. (2020). ಮಹಾ ಕಥನದ ಮಾಸ್ತಿ. ವಸಂತ ಪ್ರಕಾಶನ. ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.